LEGISLATIVE ASSEMBLY.

FIFTH DAY.

Tuesday, 20th March 1951.

The Assembly met in the Assembly Hall, Old Public Offices, Bangalore, at Five Minutes past one of the Clock.

Mr. Speaker (The Hon'ble Sri V. Venkatappa) in the Chair.

STARRED QUESTIONS.

(to which oral answers were given).

Mr. SPEAKER (The Hon'ble Sri V. Venkatappa).—Questions.
ಒಳಾಡಳಿತ ಶಾಖೆಯ ಸಚಿವರು ಬಂದಿಲ್ಲ. ಆದ್ದರಿಂದ ಎರಡನೆಯ ಪಾರ್ಟಿನ 179ನೆಯ ಪ್ರಶ್ನೆಯನ್ನು ಈಗ ತೆಗೆದುಕೊಳ್ಳೋಣ. Sri Kadidal Manjappa.

Improving the Sanitary conditions of Hotels in the State.

*Q.—179. **Sri Kadidal MANJAPPA** (Shimoga District—General).—

Will the Government be pleased to state :—

the steps they have taken to improve the sanitary conditions of the Hotels in the State?

*A.—**The Hon'ble Sri R. CHENNIGARAMIAH** (Minister for Local Self-Government).—

(1) Instructions have been issued by Government to all the Deputy Commissioners of Districts to direct such of the Town Municipalities as have not yet framed necessary bye-laws in respect of hotels and coffee clubs, to frame them immediately.

(2) Different type designs of hotels and coffee clubs have been prepared by the Government Architect and approved by the Director of Public Health for being introduced in Towns and Cities.

(3) Deputy Commissioners have been requested—

(i) to intimate various Towns and Minor Municipalities in their jurisdiction to obtain type designs for hotels and coffee clubs from the Government Architect and Town Planning Officer in Mysore, Bangalore, and not to issue fresh licenses unless the buildings conform to these designs;

(ii) to cause cancellation of old licenses in all cases which do not satisfy the hygienic and sanitary conditions;

(iii) to issue instructions to Town Municipalities to amend suitably the bye-laws in force relating to the construction of buildings so as to give effect to the orders of Government, regarding hotels and coffee clubs.

ಶ್ರೀ ಕಡಿದಾಳ್ ಮಂಜಪ್ಪನವರು.—ಸರ್ಕಾರದವರಿಗೆ ಹೋಟಲುಗಳ ಮೇಲೆ ಸರಿಯಾದ ನಿಗಾ ಇಟ್ಟುಕೊಳ್ಳುವುದಕ್ಕೆ ಅಧಿಕಾರವಿಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಅದನ್ನು ಯಾವ ರೀತಿ ಜಾರಿಯನುತ್ತಿದ್ದಾರೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೋಟಲು ಇಡಬೇಕಾದರೆ ಕೆಲವು ನಿಬಂಧನೆಗಳಿವೆ. ಅದರ ಮೇಲೆ ಲೈಸೆನ್ಸ್ ಕೊಡಲಾಗುತ್ತದೆ. ಆ ನಿಬಂಧನೆಗಳ ಪ್ರಕಾರ ನಡೆದುಕೊಳ್ಳದಿದ್ದರೆ ಕಾನೂನು ಪ್ರಕಾರ ತಕ್ಕ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಬೈಲಾ ಇಲ್ಲದೇ ಯಿರುವ ಮುನಿಸಿಪಾಲಟಿಗಳ ಪ್ರದೇಶದಲ್ಲಿರುವ ಹೋಟಲುಗಳಿಗೆ ಸ್ಯಾನಿಟರಿ ರೂಲ್ಸುನ್ನು ಅನ್ವಯಿಸುವು ದಕ್ಕೆ ಅವಕಾಶವಿಲ್ಲ. ಅಂಥ ಹೋಟಲುಗಳು ಸರಿಯಾದ ಸ್ಥಿತಿಯಲ್ಲಿಲ್ಲದೇ ಹೋದರೆ ಅದನ್ನ ಸರಿಪಡಿಸಲು ಏನು ಕಾರ್ಯಕ್ರಮವಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದನ್ನು ಉತ್ತರದಲ್ಲೇ ಹೇಳಿದೆ. ಆ ಬಗ್ಗೆ ಜಿಲ್ಲಾಧಿ ಕಾರಿಗಳಿಗೆ ತಿಳಿವಳಿಕೆ ಕೊಟ್ಟಿದೆ. ಬೈಲಾ ಇಲ್ಲದೇ ಯಿರುವ ಕಡೆ ತಕ್ಕ ಕಾರ್ಯಕ್ರಮ ಕೈಗೊಂಡು ಅದನ್ನು ಮಾಡಿಸಬೇಕೆಂದು ತಿಳಿಸಿದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಸ್ಯಾನಿಟರಿ ಇನ್ ಸ್ಪೆಕ್ಟರುಗಳು ಹೋಟಲುಗಳಲ್ಲಿ ಮಸ್ತಾಲೆದೋಸೆ ತಿಂದು ಅಲ್ಲಿನ ಸ್ಥಿತಿ ಸರಿಯಾಗಿದೆಯೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಎಷ್ಟು ಟೌನ್ ಮತ್ತು ಮೈನರ್ ಮುನಿಸಿಪಾಲಟಿಗಳಲ್ಲಿ ಹೋಟಲುಗಳ ವಿಚಾರದಲ್ಲಿ ನಿಗಾಯಿಡಲು ಯಾವ ವಿಧ ವಾದ ಬೈಲಾಗಳನ್ನೂ ಮಾಡಿಲ್ಲ ಎಂಬುದು ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಟಿ. ಮಾದಯ್ಯಗೌಡರು.—ಹಾಗಾದರೆ ಇದು ವರೆಗೆ ಬೈಲಾಮಾಡಿದ್ದಾರೆಯೇ ಅಥವಾ ಇಲ್ಲವೆ ಎಂಬು ದನ್ನು ತಿಳಿದುಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅನೇಕ ಮುನಿಸಿಪಾಲಟಿಗಳಲ್ಲಿ ಮಾಡಿದೆ. ಕೆಲವು ಕಡೆ ಮಾಡದೇಯಿರುವುದರಿಂದ ಆ ಬಗ್ಗೆ ಅಧಿಕಾರಿಗಳಿಗೆ ತಿಳಿವಳಿಕೆ ಕೊಟ್ಟಿದೆ.

ಶ್ರೀ ಟಿ. ಮಾದಯ್ಯಗೌಡರು.—ಎಷ್ಟು ಮುನಿಸಿ ಪಾಲಟಿಗಳಲ್ಲಿ ಬೈಲಾ ಮಾಡಿರುವುದಿಲ್ಲ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನರು.—ನೋಟೀಸ್ ಬೇಕು.

ಶ್ರೀ ಟಿ. ಮಾದಯ್ಯಗೌಡರು.—ಸಿಟಿ ಮುನಿಸಿಪಾ ಲಟಿಗಳಿರುವ ಕಡೆ ಹೋಟಲುಗಳ ಮೇಲೆ ನಿಮಗೆ ಯಾವ ಹತೋಟಿಯಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವುಗಳ ಮೇಲೆ ಎಲ್ಲಾ ಹತೋಟಿಯೂ ಇದೆ. ಲೈಸೆನ್ಸ್ ನಲ್ಲೇ ಕೆಲವು ಷರತ್ತುಗಳನ್ನು ನಮೂದಿಸಿದೆ. ಅವಕ್ಕೆ ಚ್ಯುತಿ ಬಂದರೆ ತಕ್ಕ ಕಾರ್ಯಕ್ರಮ ಕೈಕೊಳ್ಳಬಹುದು.

ಶ್ರೀ ಟಿ. ಮಾದಯ್ಯಗೌಡರು.—ಹೋಟಲುಗಳ ಮೇಲಿರುವ ಹತೋಟಿಯು ಷರತ್ತುಗಳ ಪ್ರಕಾರ ಜಾರಿಯಲ್ಲಿದೆಯೆ, ಇಲ್ಲವೆ ಎಂಬುದನ್ನು ನೋಡುವ ಅಧಿ ಕಾರಿಗಳು ಯಾರು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮುನಿಸಿಪಾಲಟಿಯ ಸ್ಯಾನಿಟರಿ ಇನಾಸ್ಪೆಯವರು ಮತ್ತು ಹೆಲ್ತ್ ಇನಾಸ್ಪೆಯವರು ನೋಡುತ್ತಾರೆ.

ಶ್ರೀ ಟಿ. ಮಾದಯ್ಯಗೌಡರು.—ಹೆಲ್ತ್ ಆಫೀಸರಿ ಲ್ಲದೇಯಿರುವ ಕಡೆ ಯಾರು ನೋಡಿಕೊಳ್ಳುತ್ತಾರೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ದೊಡ್ಡ ದೊಡ್ಡ ಮುನಿಸಿಪಾಲಟಿಗಳಲ್ಲಿ ಹೆಲ್ತ್ ಆಫೀಸರು, ಸಣ್ಣ ಮುನಿಸಿಪಾಲಟಿಗಳಲ್ಲಿ ಸ್ಯಾನಿಟರಿ ಇನ್ಸ್ಪೆಕ್ಟರು ನೋಡಿಕೊಳ್ಳುತ್ತಾರೆ. ಇದರ ಜೊತೆಗೆ ಸಣ್ಣ ಮುನಿಸಿಪಾಲಟಿಗಳಲ್ಲಿ ವೈಸ್ ಪ್ರೆಸಿಡೆಂಟರು ಮತ್ತು ಸದಸ್ಯರು ಸಹ ನೋಡಿಕೊಳ್ಳುತ್ತಾರೆ.

ಶ್ರೀ ಟಿ. ಮಾದಯ್ಯಗೌಡರು.—ಇದುವರೆಗೆ ಸಂಸ್ಥಾ ನಾಮಳೆ ಹೋಟಲುಗಳ ಸ್ಥಿತಿಗತಿ ಹೇಗಿದೆ ಎಂಬುದಕ್ಕೆ ಕರ್ಕಾಲಡೇಟೆಡ್ ರಿಪೋರ್ಟನ್ನು ಅಥವಾ ಪ್ರತ್ಯೇಕ ವಾದ ವರದಿಯನ್ನು ತರಿಸಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ರೀತಿ ತರಿಸಿಕೊಳ್ಳಬೇಕಾದ ಆವಶ್ಯಕತೆಯಿಲ್ಲ. ಬೇಕಾದರೆ ತರಿಸಿಕೊಳ್ಳಬಹುದು. ಆಯಾ ಸ್ಥಳಗಳಲ್ಲಿರುವ ಸದಸ್ಯರಿಗೆ ಜವಾಬ್ದಾರಿಯಿದೆ, ಅವರು ನೋಡಿಕೊಳ್ಳು ತ್ತಾರೆ ಎಂಬ ನಂಬಿಕೆಯಿದೆ.

ಶ್ರೀ ಟಿ. ಮಾದಯ್ಯಗೌಡರು.—ಮುನಿಸಿಪಾಲಟಿಯ ಸರಹದ್ದಿನಲ್ಲಿದ್ದೇಯಿರುವ ಗ್ರಾಮಾಂತರಗಳ ಹೋಟಲು ಗಳ ಮೇಲೆ ಸರ್ಕಾರಕ್ಕೆ ಏನು ಹತೋಟಿಯಿದೆ?

The Hon'ble Sri R. CHENNIGA-RAMIAH.—It does not arise out of this question.

ಅಧ್ಯಕ್ಷರು.—ಅದೇಕೆ ಉದ್ಭವಿಸುವುದಿಲ್ಲ?

The Hon'ble Sri R. CHENNIGA-RAMIAH.—Because I am concerned with the Municipality.

ಶ್ರೀ ಟಿ. ಮಾದಯ್ಯಗೌಡರು.—ಗ್ರಾಮಾಂತರದ ಹೋಟಲುಗಳ ಮೇಲೆ ಏನು ಹತೋಟಿಯಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಲೈಸನ್ಸ್ ಕೊಡುವಾಗ ಕೆಲವು ಷರತ್ತಿನ ಮೇಲೆ ಕೊಡು ತ್ತಾರೆ. ಅಲ್ಲ ಹೋಟಲುಗಳ ಸಂಖ್ಯೆಯನ್ನು ಈಗ ಕಡಮೆ ಮಾಡಿದೆ. ಜಿಲ್ಲಾಬೋರ್ಡಿನವರಿಗೆ ಅವುಗಳ ಮೇಲೆ ಅಧಿಕಾರವಿದೆ. ಅವರು ಉಸ್ತುವಾರಿ ನೋಡಿ ಕೊಳ್ಳುತ್ತಾರೆ.

ಶ್ರೀ ಟಿ. ಮಾದಯ್ಯಗೌಡರು.—ಜಿಲ್ಲಾ ಬೋರ್ಡು ಆಕ್ಟು ಅಥವಾ ಗ್ರಾಮಪಂಚಾಯತಿ ಆಕ್ಟ್ ಪ್ರಕಾರ ಹೋಟಲುಗಳ ಮೇಲೆ ಹತೋಟಿಯಿದೆಯೆ ಅಥವಾ ನೇರ ವಾಗಿ ಯಾವ ರೀತಿಯಾದರೂ ಸರ್ಕಾರಕ್ಕೆ ಹತೋಟಿ ಯಿದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಗಿರುವ ಆಕ್ಟ್ ಪ್ರಕಾರ ಗ್ರಾಮಗಳ ಹೋಟಲುಗಳ ಮೇಲೆ ಹತೋಟಿಯಿದೆ.

ಶ್ರೀ ಟಿ. ಮಾದಯ್ಯಗೌಡರು.—ಗ್ರಾಮಾಂತರಗಳಲ್ಲಿ ಲೈಸೆನ್ಸ್ ತೆಗೆದುಕೊಂಡು ಹೋಟೇಲುಗಳನ್ನು ಪ್ರಾರಂಭ ಮಾಡಬೇಕೆಂದು ನಿಬಂಧನೆ ಇದೆಯೆ?

*ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು. ಲೈಸೆನ್ಸ್ ಇಲ್ಲದೆ ಹೋಟೆಲುಗಳನ್ನು ಪ್ರಾರಂಭ ಮಾಡುವುದಕ್ಕಾಗುವುದಿಲ್ಲ ಆದ್ದರಿಂದ ಲೈಸೆನ್ಸ್ ತೆಗೆದುಕೊಂಡೇ ಪ್ರಾರಂಭ ಮಾಡುತ್ತಾರೆ.

ಶ್ರೀ ಟಿ. ಮಾದಯ್ಯಗೌಡರು.—ಗ್ರಾಮಾಂತರಗಳಲ್ಲಿರ ತಕ್ಕ ಹೋಟೇಲುಗಳವರು ಡಿಸ್ಟ್ರಿಕ್ಟ್ ಬೋರ್ಡ್‌ನಿಂದಾ ಗಲೀ ಅಥವಾ ಇತರ ಅಧಿಕಾರಿಗಳಿಂದಾಗಲೀ ಲೈಸೆನ್ಸ್ ಪಡೆದಿದ್ದಾರೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಲೈಸೆನ್ಸ್ ಪಡೆಯಬೇಕೆಂಬ ನಿರೀಕ್ಷಣೆ ಇದೆ. ಆ ರೀತಿ ಪಡೆಯದೇ ಇರುವ ನಿದರ್ಶನವನ್ನು ನವ್ಯ ಗವನಕ್ಕೆ ತಂದರೆ ತಕ್ಕ ಕಾರ್ಯಕ್ರಮಕೈಗೊಳ್ಳುತ್ತೇವೆ.

---

* Indicates that speeches have not been revised by the Member concerned.

ಶ್ರೀ ಟಿ. ಮಾದಯ್ಯಗೌಡರು.—ಗ್ರಾಮಾಂತರಗಳಲ್ಲರ ತಕ್ಕ ಹೋಟೇಲುಗಳ ಮೇಲೆ ಏನಾದರೂ ಷರತ್ತುಗಳನ್ನು ವಿಧಿಸಿ ಲೈಸೆನ್ಸ್ ಕೊಡಬೇಕೆಂದು ವಿಧಾಯಕ ಮಾಡಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೋಟೇಲುಗಳನ್ನು ತೆಗೆಯಬೇಕಾದರೆ ಸಾಮಾನ್ಯವಾಗಿ ಇರತಕ್ಕ ಷರತ್ತು ಜೊಕ್ಕಟವಾಗಿರಬೇಕು ಎಂಬುದು ಒಂದೇ. ಗ್ರಾಮಾಂತರಗಳಲ್ಲಿ ಹೊಸದಾಗಿ ಲೈಸೆನ್ಸ್ ಕೊಡುವುದೇ ಇಲ್ಲ. ಇರತಕ್ಕ ಹೋಟೇಲುಗಳನ್ನು ಕಡಿಮೆ ಮಾಡಿದ್ದಾರೆ.

ಶ್ರೀ ಟಿ. ಮಾದಯ್ಯಗೌಡರು.—ನನ್ನ ಪ್ರಶ್ನೆ ಅದಲ್ಲ. ಈಗಾಗಲೇ ಗ್ರಾಮಾಂತರಗಳಲ್ಲಿ ಹೋಟೇಲುಗಳನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ಮುಂದೆ ಸ್ಥಾಪನೆ ಮಾಡತಕ್ಕ ಹೋಟೇಲುಗಳಿಗೆ ಯಾವುದಾದರೂ ಷರತ್ತನ್ನು ವಿಧಿಸಿ ತಾವು ಲೈಸೆನ್ಸ್ ಕೊಡುವ ಏರ್ಪಾಡು ಮಾಡಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಷರತ್ತುಗಳೇನು ಎಂಬುಗನ್ನು ಬೇಕಾದರೆ ಆ ಮೇಲೆ ತಿಳಿಸುತ್ತೇನೆ.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ)—ಟೌನ್ ಮುನಿಸಿಪಾಲಟಿಗಳಲ್ಲಿ ನಡೆಯತಕ್ಕ ಹೋಟೇಲುಗಳಿಗೆ ಲೈಸೆನ್ಸ್ ಕೊಡತಕ್ಕವರು ಯಾರು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮುನಿಸಿಪಾಲಟಿಯವರು.

ಶ್ರೀ ಎಸ್. ಕರಿಯಪ್ಪನವರು.—ಈಗ ಅವರು ಎಲ್ಲಾ ಹೋಟೇಲುಗಳಿಗೂ ಲೈಸೆನ್ಸ್ ಕೊಡದೆ, ಕೆಲವು ಹೋಟೇಲುಗಳು ಲೈಸೆನ್ಸ್ ಇಲ್ಲದೆ ನಡೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಂದಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಹಾಗೆ ಲೈಸೆನ್ಸ್ ಇಲ್ಲದೆ ಹೋಟೇಲು ನಡೆಯುತ್ತಾ ಇದ್ದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಲೈಸೆನ್ಸ್ ಇಲ್ಲದೇ ನಡೆಯುತ್ತಾ ಇರತಕ್ಕ ಹೋಟೇಲಿನ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ತಾನೆ ಆ ಪ್ರಶ್ನೆ.

ಶ್ರೀ ಎಸ್. ಕರಿಯಪ್ಪನವರು.—ಈಗ ನಾನು ಹೇಳುತ್ತೇನೆ.—ಲೈಸೆನ್ಸ್ ಪಡೆದು ನಡೆಸತಕ್ಕವರ ಸಂಖ್ಯೆಗಿಂತ ಲೈಸೆನ್ಸ್ ಪಡೆಯದೇ ನಡೆಸತಕ್ಕವರ ಸಂಖ್ಯೆ ಎಷ್ಟರಷ್ಟಾಗಿದೆ ಎಂಬುದು ಗೊತ್ತೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ತಮ್ಮ ಅಭಿಪ್ರಾಯ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ಯಾಂಪಿಯ ಉತ್ತರದ ಎರಡನೇ ಪಟಂನಲ್ಲಿ 'Different type designs of Hotels and Coffee clubs' ಎಂದು ಹೇಳಿದ್ದೀರಿ. ಆ ಡಿಸೈನ್ ಎನ್ನುವುದು ಮುಂದೆ ಕಟ್ಟತಕ್ಕ ಹೋಟೇಲುಗಳಿಗೆ ತಾನೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾದು.

ಶ್ರೀ ಎಸ್. ರಂಗರಾಮಯ್ಯನವರು.—ಈಗಿರುವ ಹೋಟೇಲುಗಳನ್ನು ಸರಿಪಡಿಸುವುದಕ್ಕೆ ಏನಾದರೂ ಪ್ಲಾನ್ ಕೊಚ್ಚಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಗಿರುವ ಹೋಟೇಲುಗಳ ಕಟ್ಟಡವನ್ನು ಕಿತ್ತುಹಾಕುವುದಕ್ಕೆ ಆರ್ಡರ್ ಮಾಡಿಲ್ಲ. ಆದರೆ ಹೋಟೇಲುಗಳನ್ನು ನಡೆಸತಕ್ಕ ವಿಧಾನದಲ್ಲಿ ಕೆಲವು ನಿಬಂಧನೆಗಳನ್ನು ಹಾಕಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಹಳ್ಳಿ ಮತ್ತು ಟೌನ್‌ಗಳಲ್ಲಿ ಅನೇಕ ಕಡೆ ಹೋಟೇಲುಗಳನ್ನು ಇಡಬೇಕಾದರೆ ಮೊದಲೇ ಒರೆ ಹೇಗಿರಬೇಕು, ನೆಲ ಹೇಗಿರಬೇಕು ಎಂಬ ಬಗ್ಗೆ ನಿಯಮ ಏರ್ಪಡಿಸಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಲೈಸೆನ್ಸ್ ಕೊಡುವಾಗ ಕೆಲವು ನಿಬಂಧನೆಗಳನ್ನು ವಿಧಾಯಕ ಮಾಡಿದ್ದಾರೆ, ಅದರಂತೆ ಕೊಡುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಅನೇಕ ಕಡೆ ಮಣ್ಣು ನೆಲದ ಮೇಲೆ ಪದಾರ್ಥಗಳನ್ನು ತಯಾರು ಮಾಡುತ್ತಿರುತ್ತಾರೆ. ಅದನ್ನು ತಪ್ಪಿಸುವುದಕ್ಕೆ ಗಾರೆ ಅಥವಾ ಕಡಪಾಕಲ್ಲು ಹಾಕಬೇಕೆಂಬ ನಿಯಮ ಮಾಡಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೋಟೇಲು ತೃಪ್ತಿಕರವಾಗಿ ನಡೆಯಬೇಕಾದ ಕೆಲವು ನಿಯಮಗಳನ್ನು ಹಾಕಿದ್ದೇವೆ. ಆ ನಿಯಮಗಳಿಗನು ಸಾರವಾಗಿ ನಡೆದರೆ ಲೈಸೆನ್ಸ್ ಕೊಡುತ್ತಾರೆ. ಇಲ್ಲದೇ ಇದ್ದರೆ ಕೊಡುವುದಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ನಡೆದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ನನ್ನ ಪ್ರಶ್ನೆ ಇಷ್ಟೆ. ಇನ್ನು ಮೇಲೆ ನೆಲಕ್ಕೆ ಕಡಪಾಕಲ್ಲು ಹಾಕಿದರೇ ಲೈಸೆನ್ಸ್ ಕೊಡುತ್ತೀವೆ ಇಲ್ಲದೇ ಇದ್ದರೆ ಕೊಡುವುದಿಲ್ಲ ಎಂದು ನಿಷ್ಕರ್ಷೆ ಮಾಡುತ್ತೀರಾ?

(ಉತ್ತರ ಇಲ್ಲ).

ಶ್ರೀ ಎಸ್. ರಂಗರಾಮಯ್ಯನವರು.—ನೀವು ಹೇಳಿರತಕ್ಕ ವಿಷಯವನ್ನು ಮುಂದೆ ಕಟ್ಟತಕ್ಕ ಕಟ್ಟಡಗಳಿಗೆ ಎಂದು ಹೇಳಿದಿರಿ. ಈಗ ಬೀದಿ ಬೀದಿಯಲ್ಲಿ ಓಡೆ, ಚಕ್ಕಲಿ, ದೋಸೆ ಮಾಡುವುದು ತಮ್ಮ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಂದಿದೆ. ಅದನ್ನು ನಾನೂ ನೋಡಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಅದನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಯಾಯಾ ಮುನಿಸಿಪಾಲಟಿಯಲ್ಲಿರತಕ್ಕ ಸರ್ಕಾರಿ ಅಧಿಕಾರಿಗಳಿಗೂ ಮತ್ತು ಮುನಿಸಿಪಲ್ ಪ್ರೆಸಿಡೆಂಟರಿಗೂ ಆ ರೀತಿ ಮಾಡುವುದನ್ನು ತಪ್ಪಿಸಬೇಕು, ಅದು ಅನಾರೋಗ್ಯಕರ ಎಂಬುದಾಗಿ ನಮ್ಮ ಗಮನಕ್ಕೆ ಬಂದ ಸಂದರ್ಭದಲ್ಲೆಲ್ಲಾ ಹೇಳಿದ್ದೇವೆ. ಬೆಂಗಳೂರು ಸಿಟಿಯಲ್ಲೂ ಕೂಡ, ಇಲ್ಲಿ ಮತ್ತು ಕಂಟೋನ್ಮೆಂಟ್‌ನಲ್ಲಿ ಅದನ್ನು ತಪ್ಪಿಸುವುದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಮೈಸೂರು ಸಿಟಿಯಲ್ಲಿ ಆ ರೀತಿ ಮಾಡುವುದು ಗೊತ್ತೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಗೊತ್ತು.

ಶ್ರೀ ಎಸ್. ರಂಗರಾಮಯ್ಯನವರು.—ಅದನ್ನು ಏಕೆ ತಪ್ಪಿಸಿಲ್ಲ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ತಪ್ಪಿಸುವುದಕ್ಕೆ ತಕ್ಕ ಕಾರ್ಯಕ್ರಮ ಕೈಕೊಂಡಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಒಂದು ವೇಳೆ ಅದು ಹಾಗೇ ನಡೆಯುತ್ತಾ ಇದ್ದರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಡೆಯುತ್ತಾ ಇದ್ದರೆ ಎಂಬುದು ಹೆಚ್ಚು ಪ್ರೊಫಿಟಿಕರ್ ಆಗುತ್ತದೆ. ಪರಿಶೀಲನೆ ಮಾಡಿ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಮೈಸೂರು, ಬೆಂಗಳೂರುಗಳಲ್ಲಿ ಎಂದರೆ ಈ ರೂಲ್ಸ್ ಜಾರಿಯಲ್ಲಿರುವ ಕಡೆ, ಅದು ಜಾರಿಯಲ್ಲದ್ದರೂ ಇಲ್ಲದಿರುವ ಹಾಗೆ ಇರುವುದು ಗೊತ್ತೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಜಾರಿಯಲ್ಲಿರುವುದು ಗೊತ್ತು. ಇದ್ದರೂ ಇಲ್ಲದಿರುವ ಹಾಗೆ ಇರುವುದು ಗೊತ್ತಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ದೇಶದಲ್ಲಿ ಹೆಚ್ಚು ಹೆಚ್ಚು ರೋಗ ರುಜಿನಗಳಿಗೆ ಈ ಹೋಟೇಲುಗಳೇ ಮುಖ್ಯ ಕಾರಣ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಹೋಟೇಲುಗಳನ್ನು ಆರೋಗ್ಯಕರವಾಗಿಟ್ಟುಕೊಳ್ಳಲು ಮೇಲ್ವಿಚಾರಣೆ ನಡೆಸುವುದಕ್ಕೆ ಸೂಪರ್‌ವೈಜರುಗಳನ್ನು ನೇಮಿಸಿದ್ದೀರಲ್ಲಾ ಅವರು, ಎಷ್ಟು ದಿನಕ್ಕೆ ಒಂದು ಸಾರಿ ಹೋಟೇಲುಗಳಿಗೆ ಹೋಗಿ ತಮ್ಮ ಅಭಿಪ್ರಾಯವನ್ನು ಬರೆಯಬೇಕೆಂದು ಮಾಡಿದ್ದೀರಿ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಾನ್ಯ ಸದಸ್ಯರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾಗಿದ್ದಾರೆ. ಈ ವಿಚಾರ ಎಲ್ಲಾ ಅವರಿಗೆ ಗೊತ್ತಿದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಇಷ್ಟು ದಿನಕ್ಕೆ ಒಂದು ಸಾರಿ ಹೋಗಿ ನೋಡಬೇಕು ಎಂಬ ಒಂದು ನಿಯಮವೇನೂ ಇಲ್ಲ. ಆಗಾಗ್ಗೆ ನೋಡಬೇಕಾಗುತ್ತದೆ. ಅವಶ್ಯಕತೆ ಕಂಡು ಬಂದಾಗಲೆಲ್ಲಾ ಹೋಗಿ ನೋಡಿ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕಾದ್ದು ಅವರ ಕರ್ತವ್ಯ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಮೈಸೂರು ಬೆಂಗಳೂರು, ಪಟ್ಟಣಗಳಲ್ಲಿ ಸ್ಯಾನಿಟರಿ ಇನ್‌ಸ್ಪೆಕ್ಟರು ಎಷ್ಟು ದಿನಕ್ಕೆ ಒಂದುಸಾರಿ ಚೆಕ್ ಮಾಡಬೇಕು, ಹೆಲ್ತ್ ಆಫೀಸರು ಎಷ್ಟು ದಿನಕ್ಕೆ ಒಂದುಸಾರಿ ಚೆಕ್ ಮಾಡಬೇಕು, ಇವರೆಲ್ಲಾ ಆದಮೇಲೆ ಹೆಲ್ತ್ ಡೈರೆಕ್ಟರು ಎಷ್ಟು ದಿನಕ್ಕೆ ಒಂದು ಸಾರಿ ಹೋಗಿ ನೋಡಬೇಕು ಎಂಬ ಬಗ್ಗೆ ಒಂದು ನಿಯಮವೇನಾದರೂ ಇದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಷ್ಟೇ ದಿನಕ್ಕೆ ಒಂದು ಸಾರಿ ಹೋಗಿ ನೋಡಬೇಕೆಂಬ ಒಂದು ನಿಯಮವನ್ನೂ ಮಾಡಿಲ್ಲ. ಆದರೆ ಹೆಲ್ತ್ ಇಲಾಖೆಯವರು ಅವಶ್ಯಕತೆ ಬಿದ್ದಹಾಗೆಲ್ಲಾ ನೋಡಬೇಕು. ಪ್ರತಿದಿನವೂ ಹೋಗಿ ಅನಿರೀಕ್ಷಿತ ಭೇಟಿಕೊಡಬೇಕು ಎಂದಿದೆ. ಆದೇ ರೀತಿ ನಡೆಯುತ್ತಾ ಇದೆ ಎಂದು ನನ್ನ ಭಾವನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಡೈರೆಕ್ಟರ್ ಆಫ್ ಹೆಲ್ತ್‌ರವರು ಯಾವಾಗಲಾದರೂ ಅನಿರೀಕ್ಷಿತ ಭೇಟಿ ಕೊಟ್ಟು ಹೋಟೇಲುಗಳಲ್ಲಿ ಅಡಿಗೆ ಮನೆ, ಪಿಟ್ಟು ರುಬ್ಬುವ ಸ್ಥಳ ಮುಂತಾದುವನ್ನು ನೋಡಿದ್ದಾರೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಡಿಗೆ ಮನೆ, ರುಬ್ಬುವ ಸ್ಥಳ ಮುಂತಾದ ಕಡೆಗಳಿಗೆ ಹೋಗಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಅನಿರೀಕ್ಷಿತ ಭೇಟಿ ಕೊಟ್ಟಿದ್ದಾರೆಯೇ ಇಲ್ಲವೇ ಎಂಬ ವಿಷಯವನ್ನು ನೋಟೀಸ್ ಕೊಟ್ಟರೆ ತಿಳಿಸುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ತಾವೆಷ್ಟಾದರೂ ಹೋಟೇಲುಗಳಲ್ಲಿ ಆ ಸ್ಥಳಗಳನ್ನು ನೋಡಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಪ್ರಜಾ ಪ್ರಭುತ್ವ ಬಂದಮೇಲೆ, ಪ್ರಜಾ ಪ್ರಭುತ್ವದ ಮಂತ್ರಿಗಳು ಯಾವ ಕಾಲದಲ್ಲಾದರೂ ಹೋಟೇಲುಗಳಿಗೆ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಿದ್ದಾರೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಂಥಾ ಅವಶ್ಯಕತೆ ಕಂಡುಬಂದಿಲ್ಲ. ಅದಕ್ಕೆ ಯಾವ ಅಧಿಕಾರಿಗಳು ನಿಯಾಮಕವಾಗಿದ್ದಾರೋ ಅವರು ತಮ್ಮ ಕೆಲಸವನ್ನು ಸಮರ್ಪಕವಾಗಿ ನಡೆಸುತ್ತಾ ಇರುವುದರಿಂದ ಮಂತ್ರಿಗಳು ನೋಡಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಜನಾರೋಗ್ಯ ಇಲಾಖೆಯ ಮಂತ್ರಿಗಳಾಗಿದ್ದ ಜನಾಬ್ ಮಹಮದ್ ಪರೀಫ್‌ರವರು ಹೋಟೇಲುಗಳಿಗೆ ಹೋಗಿ, ಖುದ್ದಾಗಿ ನೋಡಿ, ಕೆಲವು ಕಡೆ ಚೆನ್ನಾಗಿಲ್ಲವೆಂದು ರಿಕಾರ್ಡ್ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಂದಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಕಾರ್ಯಕ್ರಮ ತೆಗೆದುಕೊಳ್ಳಲಾಯಿತೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ನಗರ).—ಸ್ಯಾನಿಟೆರಿ ಕಂಡೀಷನ್ ಚೆನ್ನಾಗಿಲ್ಲವೆಂದು ಯಾವುದಾದರೂ ಹೋಟೇಲುಗಳ ವಿಷಯದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಲಾಯಿತೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ರೀತಿ ದೂರು ಬಂದಿಲ್ಲ.

ಶ್ರೀ ಜಿ. ಎ. ಆಚಾರ್ಯರು (ಬೆಂಗಳೂರು ಜಿಲ್ಲೆ).—ಬೆಂಗಳೂರಿನಂಥ ದೊಡ್ಡ ಪಟ್ಟಣದಲ್ಲಿ ಶುಭ್ರವಾದ ಹೋಟೇಲುಗಳು ಇಲ್ಲ ಎಂಬುದಾಗಿ ಪತ್ರಿಕೆಗಳಲ್ಲಿ ಬಂದಿರುವುದು ಗೊತ್ತೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇರಬಹುದು. ನಾನು ನೋಡಿಲ್ಲ.

Sri G. A. ACHARYA.—From the economic point of view I am asking whether hotels are not earning huge profits?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೋಟೆಲುಗಳವರಿಗೆ ಲಾಭ ಬರುತ್ತದೆಯೇ ಇಲ್ಲವೇ ಎಂಬುದು ಅವರಿಗೇ ಗೊತ್ತು, ನನಗೆ ಗೊತ್ತಿಲ್ಲ. ಲಾಭ ಬರಬಹುದು.

Sri G. A. ACHARYA.—Then why not Government start a hotel for the sake of travellers? (Laughter.)

(No answer.)

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಮೈಸೂರು ಪಟ್ಟಣದಲ್ಲಿ ಲೈಸೆನ್ಸ್ ಇಲ್ಲದೇ ನಡೆಯುತ್ತಿರುವ ಹೋಟೇಲುಗಳಿರುವುದು ಗೊತ್ತೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಗೊತ್ತಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಸಯ್ಯಾಜೀರಾವ್ ರಸ್ತೆಯಲ್ಲಿ ಲೈಸೆನ್ಸ್ ಇಲ್ಲದೆ ಒಂದು ಹೋಟೇಲು ನಡೆಯುತ್ತಿದೆ. ಅಲ್ಲಿಗೆ ನಾವಿರಾರು ಜನ ಹೋಗಿ ತಿಂಡಿ ತಿನ್ನುತ್ತಾರೆ ಎಂಬುದು ಗೊತ್ತೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಇಲ್ಲ. ವಿಚಾರಿಸುತ್ತೇನೆ.

Sri K. PUTTASWAMI (Mandya District-General).—We are spending more time on this one question than what is required. It must have come to the notice of the Chair that we have not been able to reach even half a dozen questions in question hour. I very respectfully submit that time may be restricted and the Chair may be pleased to exercise its discretion.

ಶ್ರೀ ಎಂ. ಎಕ್ ಜೋಯಿಸರು (ಮೈಸೂರು ಜಿಲ್ಲೆ).— ಸಂತೆಗಳಲ್ಲಿರುವ ಹೋಟಲುಗಳ ಮೇಲೆ ಯಾರು ಹತೋಟಿ ಇಟ್ಟುಕೊಳ್ಳುವವರು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಸಂತೆ ನಡೆಸತಕ್ಕವರು.

ಶ್ರೀ ಎಂ. ಎಕ್. ಜೋಯಿಸರು.—ಸಂತೆಗಳನ್ನು ನಡೆಸತಕ್ಕವರು ಡಿಸ್ಟ್ರಿಕ್ಟ್ ಬೋರ್ಡಿನವರಲ್ಲವೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಹೌದು.

ಶ್ರೀ ಎಂ. ಎಕ್. ಜೋಯಿಸರು.—ಹಾಗಾದರೆ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರುಗಳು ಎಷ್ಟುಸಾರಿ ಈ ಹೋಟಲುಗಳನ್ನು ತನಿಖೆಮಾಡಿ ನೋಡಿದ್ದಾರೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಅದನ್ನು ವಿಚಾರಿಸಿ ಹೇಳಬೇಕು.

Sri H. C. LINGA REDDY (Kolar District-General).—Instead of issuing licenses, are the Government contemplating to auction the hotels?

The Hon'ble Sri R. CHENNIGARAMIAH.—It does not arise out of this question.

Sri H. C. LINGA REDDY.—In view of improving the sanitary conditions of the hotels, are the Government contemplating the auction of hotels?

The Hon'ble Sri R. CHENNIGARAMIAH.—That is not under contemplation.

ಶ್ರೀ ಡಿ. ಗೋವಿಂದದಾಸ್‌ರವರು (ಹಾಸನ ಜಿಲ್ಲೆ).— ಹೋಟಲುಗಳಿಗೆ ಹರಿಜನರು ಹೋಗುವುದಕ್ಕೇನಾದರೂ ಪರತ್ತಿದೆಯೆ?

ಅಧ್ಯಕ್ಷರು.—That question does not arise. ಅವರು ಹೋಗುವುದಕ್ಕೆ ಅವಕಾಶವಿದೆಯೆಂದು ಕಾನೂನಿನಲ್ಲೇ ಇದೆ.

Statistics of Graduate according to Districts for the past ten years.

*Q.—76. **Sri T. C. HONNAPPA** (Mysore District-General).—

Will the Government be pleased to state :—

(*a*) the actual number of students who have obtained the Graduate Degree in Mysore District, since the past ten years ;

(*b*) their respective castes and communities ;

(*c*) whether any of these Graduates are able to get Foreign Scholarships, (details to be given) ?

*A.—**The Hon'ble Sri K. CHENGALARAYA REDDY** (Chief Minister).—

(*a*), (*b*) and (*c*) Information is not available, as the University has not maintained statistics of graduates according to districts.

ಶ್ರೀ ಟಿ. ಸಿ. ಹೊನ್ನಪ್ಪನವರು.—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಗ್ರಾಜುಯೇಟ್‌ಗಳಾದವರು ಎಷ್ಟು ಮಂದಿ ಎಂದು ಕೇಳಿದ್ದಕ್ಕೆ ಡಿಸ್ಟ್ರಿಕ್ಟ್ ವಾರ್ ಲೆಕ್ಕ ಇಟ್ಟಿಲ್ಲ ಎಂದು ಹೇಳಿದ್ದೀರಿ. ಮುಂದಾದರೂ ಆ ರೀತಿ ಡಿಸ್ಟ್ರಿಕ್ಟ್‌ವಾರ್ ಲೆಕ್ಕಗಳನ್ನಿಡುವುದಕ್ಕೆ ಏರ್ಪಾಡುಮಾಡುತ್ತೀರಾ?

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ವಿಶ್ವವಿದ್ಯಾನಿಲಯದವರು ಇಂತಿಂಥಾ ಡಿಸ್ಟ್ರಿಕ್ಟಿನಿಂದ ಇಷ್ಟಿಷ್ಟು ವಿದ್ಯಾರ್ಥಿಗಳು ಎಂದು ಲೆಕ್ಕ ಇಟ್ಟಿಲ್ಲ. ಆದ್ದರಿಂದ ಈ ವಿಷಯವನ್ನು ತಿಳಿಸುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಮುಂದಾದರೂ ಈ ರೀ ಡಿಸ್ಟ್ರಿಕ್ಟ್‌ವಾರ್ ಲೆಕ್ಕಗಳನ್ನಿಡುವುದಕ್ಕೆ ಏರ್ಪಾಡುಮಾಡುತ್ತೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ವಿಶ್ವವಿದ್ಯಾನಿಲಯದವರನ್ನು ವಿಚಾರಿಸಿ ನೋಡಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಮೈಸೂರು ಡಿಸ್ಟ್ರಿಕ್ಟ್‌ನ ವಿದ್ಯಾರ್ಥಿಗಳಲ್ಲಿ ಪರದೇಶಗಳಿಗೆ ಓದಲು ಹೋಗುವುದಕ್ಕೆ ಯಾರಿಗಾದರೂ ಸ್ಕಾಲರ್‌ಷಿಪ್ಪುಗಳನ್ನು ಕೊಟ್ಟಿದ್ದೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ನೋಟೀಸ್ ಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಅದೇ ಪ್ರಶ್ನೆಯನ್ನೇ ನಾನಿಲ್ಲಿ ಕೇಳಿದ್ದೇನೆ.

ಅಧ್ಯಕ್ಷರು.—ಅದನ್ನು ಹೇಳುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರಲ್ಲಾ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಸ್ಕಾಲರ್‌ಷಿಪ್ಪುಗಳನ್ನು ಕೊಡುವುದು ವಿಶ್ವವಿದ್ಯಾನಿಲಯದವರಲ್ಲ; ಸರ್ಕಾರದವರು ಕೊಡುತ್ತಾರೆ. ಆದ್ದರಿಂದ ಅವರು ಉತ್ತರ ಕೊಡಬಹುದು.